ಎಸ್.ಸಿ. ಸಂ:10011/21
ಪಿಡಬ್ಲ್ಯೂ 01

ಪ್ರಮಾಣ ವಚನ ಭೋದಿಸಿದ ದಿನಾಂಕಃ 26-03-2022.

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ಆರೋಪಿತರು ನನಗೆ ಹೊಡೆದು ನನ್ನನ್ನು ತೋಟದಿಂದ ಮಕ್ಕಿಗದ್ದೆಯ ಹತ್ತಿರ ಎಳೆದುಕೊಂಡು ಬಂದರು , ಆಗ ನನ್ನ ಅಣ್ಣ ಸದಾಶಿವಪ್ಪ ಅಲ್ಲಿಗೆ ಬಂದರು , ಅವರು ಏಕೆ ಹೀಗೆ ಮಾಡುತ್ತೀರಿ ಎಂದು ಆರೋಪಿತರಿಗೆ ಹೇಳಿ ಬಿಡಿಸಿದರು. ನಂತರ ನನ್ನ ಅಣ್ಣ ನನ್ನನ್ನು ಸಾಗರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗೆ ಸೇರಿಸಿದರು. ಸಾಗರ ಸರ್ಕಾರಿ ಆಸ್ಪತ್ರೆಯಲ್ಲಿ 2 ದಿನ ಒಳ ರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ರೆಫರ್ ಮಾಡಿರುತ್ತಾರೆ. ಮೆಗ್ಗಾನ್ ಆಸ್ಪತ್ರೆಯಲ್ಲಿ ನನ್ನ ಎಡ ಕಾಲಿಗೆ ಶಸ್ತ್ರ ಚಿಕಿತ್ಸೆ ಮಾಡಿ ಗುಂಡನ್ನು ಹೊರ ತೆಗೆದರು. ನಾನು ಸಾಗರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಸಾಗರ ಗ್ರಾಮಾಂತರ ಠಾಣೆಯ ಪೋಲೀಸರು ಬಂದು ನನ್ನನ್ನು ವಿಚಾರ ಮಾಡಿದರು ಮತ್ತು ನನ್ನ ಹೇಳಿಕೆಯನ್ನು ಪಡೆದುಕೊಂಡರು. ಸದರಿ ಹೇಳಿಕೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಹೇಳಿಕೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ -1 ಎಂದು ಗುರುತಿಸಲಾಯಿತು. ನಿಪಿ -1(ಎ) ನನ್ನ ಸಹಿ ಇರುತ್ತದೆ.

ಆರೋಪಿತರು ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಆ ರೀತಿ ಬಂದೂಕಿನಿಂದ ಗುಂಡನ್ನು ಹಾರಿಸಿ ರಕ್ತಗಾಯಗೊಳಿಸಿರುತ್ತಾರೆ . ಮೆಗ್ಗಾನ್ ಆಸ್ಪತ್ರೆಯಿಂದ 24 ಅಥವಾ 25 ನೇ ತಾರೀಖಿನಂದು ಡಿಸ್ಚಾರ್ಜ್ ಆಗಿರುತ್ತೇನೆ. 2 ನೇ ಆರೋಪಿ ನನಗೆ ಗುಂಡು ಹಾರಿಸಿದಾಗ ನಾನು ಲುಂಗಿ , ಅಂಗಿ ಮತ್ತು ಟವೆಲ್ ಧರಿಸಿದ್ದೆನು. ಸುಮಾರು 3-4 ತಿಂಗಳ ನಂತರ ಸದರಿ ಲುಂಗಿ , ಅಂಗಿ ಮತ್ತು ಟವೆಲ್ ಗಳನ್ನು ಸಾಗರ ಟೌನ್ ಪೋಲೀಸ್ ಠಾಣೆಗೆ ತಂದು ಹಾಜರುಪಡಿಸಿರುತ್ತೇನೆ. ಪೋಲೀಸರು ನಾನು ಹಾಜರುಪಡಿಸಿದ ಬಟ್ಟೆಗಳನ್ನು

ಅಮಾನತ್ತುಪಡಿಸಿಕೊಂಡು ಪಂಚನಾಮೆ ಮಾಡಿ ಫೋಟೋ ತೆಗೆಸಿದರು. ಅಮಾನತ್ತು ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ -2 ಎಂದು ಗುರುತಿಸಲಾಯಿತು. ನಿಪಿ -2(ಎ) ನನ್ನ ಸಹಿ ಇರುತ್ತದೆ. ಪಂಚನಾಮೆ ಕಾಲಕ್ಕೆ ತೆಗೆದ ಭಾವಚಿತ್ರವನ್ನು ಈಗ ನೋಡುತ್ತಿದ್ದುಅದನ್ನು ನಿಪಿ -3 ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಮುರುಗೇಂದ್ರಪ್ಪ ಮತ್ತು ಮಂಜುನಾಥ ಹಾಜರು ಇದ್ದರು. ಸದರಿ ಬಟ್ಟೆಗಳನ್ನು ಒಂದು ಬಿಳಿ ಬಟ್ಟೆಯಲ್ಲಿ ಸುತ್ತಿ ಸೀಲ್ ಮಾಡಿರುತ್ತಾರೆ .

(ಈಗ ನ್ಯಾಯಾಲಯದ ಮುಂದೆ, ಮಹಜರ್ ಕಾಲಕ್ಕೆ ಜಪ್ತಿ ಮಾಡಿದ ಸ್ವತ್ತುಗಳನ್ನು ಬಿಳಿಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿ ಸೀಲು ಹಾಕಿದ್ದನ್ನು, ಅವುಗಳನ್ನು ತೆರೆದ ನ್ಯಾಯಾಲಯದಲ್ಲಿ ಸೀಲುಗಳನ್ನು ಬಿಚ್ಚಿ ನೋಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು, ಅದರಂತೆ ಸದರಿ ಸ್ವತ್ತುಗಳ ಸೀಲ್ ಬಿಚ್ಚಿ ತೆರೆಯಲಾಯಿತು)

ನಾನು ಆ ದಿನ ಧರಿಸಿದ್ದ ಬಟ್ಟೆಗಳನ್ನು ಈಗ ನ್ಯಾಯಾಲಯದಮುಂದೆ ನೋಡಿ ಗುರುತಿಸಿದ್ದೇನೆ. ತಿಳಿ ಹಸಿರು ಕಪ್ಪು ಚೌಕಳಿ ಇರುವ ಮಾಸಲು ಲುಂಗಿಯನ್ನು ಈಗ ನೋಡುತ್ತಿದ್ದು ಅದನ್ನು ಮು ಮಾ -1 ಎಂದು ಗುರುತಿಸಲಾಯಿತು. ತಿಳಿ ನೀಲಿ ಕಪ್ಪು ಚೌಕಳಿ ಇರುವ ಲುಂಗಿ ತುಂಡು ಮಾಸಲು ನ್ನು ಮು ಮಾ -2 ಎಂದು ಗುರುತಿಸಲಾಯಿತು. ಕೆಂಪು ಬಣ್ಣದ ಮಾಸಲು ಟವೆಲ್ ನ್ನು ಮು ಮಾ 3 ಎಂದು ಗುರುತಿಸಲಾಯಿತು.

ನಾನು ರಕ್ತ ಪರೀಕ್ಷೆಯನ್ನು ಸಾಗರದ ಹೆಗಡೆ ಲ್ಯಾಬೊರೇಟರಿಯಲ್ಲಿ ಮಾಡಿಸಿರುತ್ತೇನೆ. ನನ್ನ ರಕ್ತ 'ಒ' ಗುಂಪಿನ ರಕ್ತ ಇದ್ದು ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ -4 ಎಂದು ಗುರುತಿಸಲಾಯಿತು.

(ಈಗ ನ್ಯಾಯಾಲಯದ ಮುಂದೆ, ಮಹಜರ್ ಕಾಲಕ್ಕೆ ಜಪ್ತಿ ಮಾಡಿದ ಬಂದೂಕನ್ನು ಬಿಳಿಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿ ಸೀಲು ಹಾಕಿದ್ದನ್ನು, ಅದನ್ನು ತೆರೆದ ನ್ಯಾಯಾಲಯದಲ್ಲಿ ಸೀಲುಗಳನ್ನು ಬಿಚ್ಚಿ ನೋಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು, ಅದರಂತೆ ಸದರಿ ಸ್ವತ್ತಿನ ಸೀಲ್ ಬಿಚ್ಚಿ ತೆರೆಯಲಾಯಿತು)

1 ನೇ ಆರೋಪಿ ನನ್ನ ಮೇಲೆ ಗುರಿ ಇಟ್ಟಿದ್ದ ಮತ್ತು 2 ನೇ ಆರೋಪಿಯು ನನಗೆ ಗುಂಡು ಹಾರಿಸಿದ ಬಂದೂಕನ್ನು ಈಗ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದೇನೆ. ಅದನ್ನು ಮು ಮಾ -4 ಎಂದು ಗುರುತಿಸಲಾಯಿತು. ಆ ದಿನ ಗಲಾಟೆ ಮಾಡಿ ಪಿಸ್ತೂಲಿನಿಂದ ನನ್ನ ಮೇಲೆ ಹಲ್ಲೆ ಮಾಡಿದ ಆರೋಪಿತರು ಈಗ ನ್ಯಾಯಾಲಯದ ಮುಂದೆ ಹಾಜರು ಇರುತ್ತಾರೆ, ಅವರನ್ನು ನೋಡಿ ಗುರುತಿಸಿದ್ದೇನೆ .

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಈ ಎನ್ ವಕೀಲರಿಂದಃ</u>

ಶ್ರೀ ಈ ಎನ್ ವಕೀಲರು ಗೈರು ಹಾಜರು ಇದ್ದು ಶ್ರೀ ಕೆ ಆರ್ ಎಸ್ ವಕೀಲರು ಈ ಎನ್ ವಕೀಲರ ಪರವಾಗಿ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ . ಕಾಲಾವಕಾಶ ನೀಡಲು ಯಾವುದೇ ಸಕಾರಣಗಳು ಇರುವುದಿಲ್ಲ , ಆದ್ದರಿಂದ ಪಾಟೀಸವಾಲು ಏನೂ ಇಲ್ಲ ಎಂದು ಪರಿಗಣಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).